203(4)

— ಪಾರದ ಸಂಚಿಕೆ —

Reg No. M 1299 (Founded 1917) Daily & Weekly

ಸತ್ಯವಾದಿ

SATYAVADI

(ಛರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟುದು)

ಸಂಪುಟ 28 ಸಂಚಿಕೆ 184] ಸೋಮವಾರ 16—4—45 [6 ಪೈ

ಅಲ್ಯೂಮಿನಿಯಂ ಸೇತುವೆ

ರಣರಂಗದಲ್ಲಿ ಹಂಗಾಮಿಯಾಗಿ ಉಪಯೋಗಿಸಲು 54 ಟ್ ಅಲ್ಯೂಮಿನಿಯಂ ಲೋಹದ ಸೇತುವೆಗಳು ತಯಾರಾಗಿವೆ. ಇವುಗಳನ್ನು ಅಮೇರಿಕನ್ನರು ಪ್ರಪಂಚದ ನಾನಾ ಭಾಗಗಳಿಗೆ ಕಳುಹಿಸುವರು. ಪ್ರಾಯಂ ಸೇತುವೆ ಕಟ್ಟಿದ ಮೇಲೆ ಇವುಗಳನ್ನು ಇತರ ಕಡೆಗೆ ಸಾಗಿಸುವರು.

ಚೈನಾದಲ್ಲಿ ಎರಡು ಸರಕಾರವೇ ?

ಚೈನಾ ಕಮ್ಯುನಿಸ್ಟ್ ಪಾರ್ಟಿಯವರು ತಮ್ಮದೇ ಆದ ಒಂದು ಸರಕಾರವನ್ನು ಚೈನಾದಲ್ಲಿ ಸ್ಥಾಪನೆ ಮಾಡಿರುವುದಾಗಿಯೂ. ಇವರ ಅಡಳಿತದಲ್ಲಿ 80 ಮಿಲಿಯನ್ ಪ್ರಜೆಗಳು ಮತ್ತು 60 ಲಕ್ಷ ಸೈನಿಕರುಗಳೂ ಇರುವುದಾಗಿ ತಿಳಿದು ಬಂದಿದೆ. ಹೀಗಾದರೆ ಚೈನಾಪಾಡು ನಾಯಿ ಪಾಡೇ !

ಹೊಸ ತರಹ ಸ್ಟ್ಯಾಂಪು

ಇದೇ ತಿಂಗಳು ತಾ || 25 ರಲ್ಲಿ ಸ್ಯಾನ್‌ಫ್ರಾನ್ಸಿಸ್ಕೋದಲ್ಲಿ ಜರಗುವ ಸಮ್ಮೇಳನದ ಮೊದಲನೇ ದಿನದ ಅಂಚೇ ಇಲಾಖೆಯವರು ಇದರ ಜ್ಞಾಪಕಾರ್ಥವಾಗಿ ಒಂದು ಹೊಸ ತರಹ ಸ್ಟ್ಯಾಂಪನ್ನು ಜಾರಿಗೆ ತರುವರು.

ರಷ್ಯಾ-ಜಪಾನ್

ಈಗ 8–9 ವರ್ಷದಿಂದಲೂ ರಷ್ಯಾ ಜಪಾನ್‌ಗಳಿಗೆ ಎಲ್ತೆಕಟ್ಟೆಯ ವಿಷಯದಲ್ಲಿ 2500 ತಕರಾರ ಗರ್ಷಣೆಗಳಾಗಿವೆ.

ಸ್ಟಾಲಿನ್

ಸ್ಟಾಲಿನ್ ಕೈಲಿ ಟ್ರಂಪ್ ಕಾರ್ಡಿದೆ. ಪ್ರಪಂಚದಲ್ಲಿ ಅತ್ಯಂತ ಶಕ್ತಿ ಪುರುಷನೆಂದರೆ ಸ್ಟಾಲಿನ್. ಜಪಾನಿಗಳು ಇವನ ಸಂಗಡ ಜರ್ಬ್ ದಾಡುವುದಿಲ್ಲ. ಕೇಳಿದ್ದನ್ನೆಲ್ಲಾ ಕೊಟ್ಟುಬಿಡುವರಂತೆ. ಮುಂದೆ ನೋಡಬೇಕು.

ಅಮೇರಿಕಾದಲ್ಲಿ, ಸರವಾಯಿಲ್ಲ

ಅಮೇರಿಕಾದಲ್ಲಿ ಈಗ ಎರಡು ವರ್ಷದ ಕಳಗೆ ಇದ್ದ ಆಹಾರ ಬೆಲೆಗಿಂತ ಈಗ ಶೇಕಡ ಎರಡರಷ್ಟು ಪಾತ್ರ ಹೆಚ್ಚಾಗಿದೆ,

ಜೀವವಿಮೆ ಕಂಡುಹಿಡಿದವರು

ಜೀವವಿಮೆ ಕಂಡುಹಿಡಿದವರು ಯಾರು ಗೊತ್ತೇ ? ಜರ್ಮನ್ ಆರ್‌ನೊಲ್ಡ್. 9-2-1827 ರಲ್ಲಿ.

ಫೀ | ಮಾ | ಮಾಂಟ್ಗೋಮರಿ ಮತ್ತು ಜ | ಐಸೆನ್‌ಹೋವರ್‌ರವರು ಆಕ್ರಮಿತ ಜರ್ಮನಿಯಲ್ಲಿ ಮಾತನಾಡುತ್ತಿರುವ ಚಿತ್ರ

ಕೂದಲಿಗೆ ಗ್ರಹಚಾರ

ರೋಂ ದೇಶದಲ್ಲಿ ಆಶ್ಚರ್ಯವಾದ ಸಂಗತಿಗಳು ನಡೆಯುತ್ತಿವೆ. ಅಲ್ಲಿನ ಯುವಕ ಯುವತಿಯರಲ್ಲಿ ದ್ವೇಷಾಸೂಯೆಗಳು ಉತ್ಪನ್ನವಾಗುತ್ತಿವೆ. ಇದರ ವಿಷಯವನ್ನು ಕೇಳುವವರಿಗೆ ತಮಾಷೆ ಮೂಡಲು ಒಂದು ವಸ್ತುವು ದೊರೆತಷ್ಟು ಆನಂದವಾಗುವುದು.

ಅದೇನೆಂದರೆ ಇಟಲಿಯ ಯುವತಿಯರುಗಳು ರೋಂ ದೇಶದಲ್ಲಿ ಮಿತ್ರ ಸೈನಿಕರೊಡನೆ ಲೀಲಾಜಾಲವಾಗಿ ನಲಿದಾಡುತ್ತಿರುವರು. ಈ ರೀತಿಯ ಆಟ ಅಲ್ಲಿನ ತರುಣರಿಗೆ ಸರಿ ಬೀಳುತ್ತಿಲ್ಲ. ಅನೇಕ ವಿಧದಲ್ಲಿ ಯುವಕರು ಯುವತಿಯರುಗಳಿಗೆ ನೀತಿಯನ್ನು ಭೋಧಿಸಿದರು. ಪ್ರಯೋಜನವೇನೂ ಕಾಣ ಬರಲಿಲ್ಲ. ಯುವಕರುಗಳು ಕುಪಿತರಾದರು. ಯುವತಿಯರುಗಳಿಗೆ ಶಿಕ್ಷೆ ಮಾಡಲು ತಯಾರಾದರು. ಶಿಕ್ಷಿಸವ ಸಲುವಾಗಿ ಯುವಕರುಗಳು ಒಂದು ಪಟಾಲಂನ್ನು ಸಿದ್ಧ ಮಾಡಿದರು. ಈ ಸಾಹಸ ಕೃತ್ಯದಿಂದ ಅಲ್ಲಿನ ಯುವತಿಯರುಗಳ ತಲೆಯ ಕೂದಲುಗಳು ಹರಿತವಾದ ಕತ್ತರಿಯ ಸೇವೆಯನ್ನು ಹೊಂದುತ್ತಿವೆ !

ಮತಾಧಿಕಾರ

ಫ್ರೆಂಚ್ ಸ್ತ್ರೀಯರಿಗೆ ಮತ ಕೊಡುವ ಹಕ್ಕು ಈಗ ದೊರೆತಿದೆ. ಇದಕ್ಕಾಗಿ ಅವರು ಬಹಳ ಶ್ರಮಪಟ್ಟರು.

ನವೀನ ರೀತಿಯ ಸಂಘ

ಅನೇಕರಿಗೆ ಸರಿಯಾಗಿ ಹಲ್ಲು ಉಜ್ಜಿ ಕೊಳ್ಳಲು ಬರುವುದಿಲ್ಲವಂತೆ. ಇದಕ್ಕಾಗಿ ಅಮೇರಿಕದಲ್ಲಿ ಸಂಘವೊಂದು ಸ್ಥಾಪನೆಯಾಗಿದೆ. ಈ ಸಂಘದ ಕಾರ್ಯವು ಹಲ್ಲುಜ್ಜಲು ಬಾರದವರಿಗೆ ಹಲ್ಲು ಜ್ಜುವುದನ್ನು ಕಲಿಸುವುದು.

ವಿವಿಧ ವರ್ತಮಾನ

ಪೈ || ರೂಸ್ವೆಲ್ಟರ ನಿಧನದಿಂದ ನಾಜಿಗಳು ಮಿತ್ರರಲ್ಲಿ ಒಡಕನ್ನುಂಟುಮಾಡಲು ಪ್ರಯತ್ನಿಸಬಹುದೆಂದು ಹೇಳಲಾಗಿದೆ

ಬರುವ ಜೂ॥ ತಿಂಗಳಲ್ಲಿ ಬ್ರಿಟನ್ನಿನಲ್ಲಿ ಮಹಿಳ ಜನಾವಣೆ ನಡೆಯುವುದೆಂದೂ, 1935 ರಿಂದ ಜನಾವಣೆ ನಡೆದಿಲ್ಲವೆಂದೂ. ಈ ಸಾರಿ ಹೆಚ್ಚು ಮಂದಿ ಸ್ಪರ್ಧಿಸುವರೆಂದೂ ತಿಳಿಯುಬಂದಿದೆ.

ಮೊನ್ನೆ ಟೋಕಿಯೋ ಮೇಲೆ ಮಿತ್ರರು ಭಾರಿ ಧಾಳಿ ನಡೆಸಿ ತುಂಬಾ ನಷ್ಟವನ್ನುಂಟುಮಾಡಿರುವರು.

ವಿಯನ್ನಾ ಪೂರ್ತಾ ರಷ್ಯನ್ನರ ವಶವಾಯಿತು.

ಮೈಸೂರು ಸಂಸ್ಥಾನದ ಅನೇಕ ಕಡೆಗಳಲ್ಲಿ ವಿಲ್ ಪಂಚೆಗೆ ಅಭಾವ ವಾಗಿರುವುದೆಂದು ಹೇಳಲಾಗಿದೆ .

ಮೈಸೂರು ಮಂತ್ರಿಮಂಡಲದಲ್ಲಿ ಹರಿಜನರಿಗೂ ಒಂದು ಸ್ಥಾನವಿರಬೇಕೆಂದು ಆ ಸಂಘದ ಅಧ್ಯಕ್ಷರ ಆಶೆ.

ಮಧ್ಯ ಬರ್ಮಾದಲ್ಲಿ ಸಿತ್ತಂಗ್ ಸ್ಟೇಟಿಗೆ ಹೋಗುವ ರಸ್ತೆಯಲ್ಲಿನ ಹೈಂಗ್‌ಡೆಟ್ ಪಟ್ಟಣ ಮಿತ್ರರ ವಶವಾಯಿತು.

ಮಿ || ಜಿನ್ನಾರವರು 10 ಕೋಟಿ ಮುಸ್ಲಿಂರಪ್ರತಿನಿಧಿಗಳಲ್ಲವೆಂದುಮುಸ್ಲಿಂ ಮಜಿಲಿಸ್ ಸಂಘದ ಅಧ್ಯಕ್ಷರು ಲಂಡನ್ನಿಗೆ ಲಾರ್ಡ್ ವೇವಲ್ಲರಿಗೆ ಕೇಬಲ್ ಮಾಡಿದಾರೆ.

ಗುರುವೇ ಪತಿ ಶಿಷ್ಯಳೇ ಪತ್ನಿ

ಶಿರಸಿಯಲ್ಲಿನ ಸ್ವಾರಸ್ಯ ವಿಷಯ

ಶಿರಸಿಯಲ್ಲಿಯ ಮಾರಿಕಾಂಬಾ ಹೈಸ್ಕೂಲಿನಲ್ಲಿಯ ಶಿಕ್ಷಕರಲ್ಲೊಬ್ಬರಾದ ಶ್ರೀ ಕೃಷ್ಣರಾವ್ ಡಿ. ತಳಗಾರಂಕರ ಇವರು ಬ್ರಾಹ್ಮಣ ಜಾತಿಯವರಿದ್ದು ಹೆಂಡತಿ ಮಕ್ಕಳೊಂದಿಗರಾಗಿ 42 ವರ್ಷ ಪ್ರಾಯ ಮಿಕ್ಕಿದ್ದರೂ ತಮ್ಮಲ್ಲಿ ಖಾಸಗಿ ಶಿಕ್ಷಣ ಪಡೆಯಲು ಬರುತ್ತಿದ್ದ ಇಲ್ಲಿಯ ಪೌರಸಭೆಯ ಸ್ತ್ರೀ ಸದಸ್ಯಳಾದ ರಾಜೀವಿ ತಾಯಿ ವ್ಯಾರಿವಾತಂಬೇಕರ ಇವಳ ಮಗಳಾದ ಲಲೀತಾ ಘಾತರಘೇಕರ ಎಂಬ 20 ವರ್ಷದ ಕಲಾವಂತ ಜಾತಿಯ ಶಿಷ್ಯಳೊಡನೆ ಕಳೆದ 12-3 45 ರಲ್ಲಿ ವಿವಾಹವಾದರೆಂದು ಸ್ಥಳೀಯ ಪೌರಸಭೆಯ ವಿವಾಹ ರಿಜಿಸ್ಟರಿನಲ್ಲಿ ಕಳೆದ 26-3-45 ರಲ್ಲಿ ದಾಖಲಾಗಿದೆಯೆಂದು ಹೊತ್ತಾಗಿ ಧೆ. ಈ ಘಟನೆಯು ವಿದ್ಯಾರ್ಥಿನಿಯರಿಗೂ ಅವರ ತಂದೆತಾಯಿಗಳಿಗೂ ಗಾಭರಿ ತಂದೊಡ್ಡಿದೆ !

ಟಿಸ್ಟ್ ಟ್ಯೂಬ್ ಶಿಶುಗಳು

ಕ್ರೈಸ್ತಮುಖ್ಯಗುರುಗಳು ಅಸ್ವಭಾವಿಕ ಬೀಜಾವಾಪ ಮಾಡುವುದನ್ನು

ಖಂಡನೆ ಮಾಡಿದರು.

ಪರಮ ಗುರುವು ಈಗ ದನಗಳ ಮೇಲೆ ಈ ತರಹ ಬೀಜಾವಾಪ ಪ್ರಯೋಗ ಮಾಡಿ, ಸ್ತ್ರೀ ಜಾತಿಯು ಮೇಲೆ ಈಗ ಈಕರಹ ಶಿಕ್ಷಣ ಕೊಡುವ ಸಂಸ್ಥೆಗಳನ್ನು ಸ್ಥಾಪಿಸಿರುವುದು ಅಸಹ್ಯಕರವೆಂದು ಹೇಳಿದರು.

ವೆಸ್ಟ್‌ಮಿನಿಸ್ಟರಿನಲ್ಲಿ ಪ್ರಮುಖ ಗುರು ಡಾ ||ನರ್ಡಾರ್ಡ್ ಗ್ರಿಫಿನ್ನರು ರೋಮ್ ಕ್ಯಾಥೊಲಿಕ್ ವೈದ್ಯರಿಗೆ ಅಸ್ವಾಭಾವಿಕ ಬೀಜವಾಪ ಮಾಡಿಕೊಳ್ಳುವುದು ಅಸಹ್ಯದ ಕೆಲಸವೆಂದು ಹೇಳಿದರು.

ನಾನು ಹೇಳುವುದು ಗಂಡಹೆಂಡರ ಸ್ವಾಭಾವಿಕ ವಿಷಯದಲ್ಲಲ್ಲ. ನಾವು ಯೋಚಿಸಬೇಕಾದುದು ಒಬ್ಬ ಸ್ತ್ರೀಯು ತನ್ನ ಗಂಡನಲ್ಲದ ಮತ್ತಾವನೋ ಒಬ್ಬ ಅಪರಿಚಿತನ ಬೀಜಾವಾಪದ ವಿಷಯವಾಗಿ. ಇಂಥಾ ಪದ್ಧತಿಯು ಮನುಷ್ಯನ ಗೌರವಕ್ಕೆ ಕುಂದಕವಾದುದು. ಮತ್ತು ಸ್ವಭಾವ ನಿಯಮಕ್ಕೆ ವಿರುದ್ಧವಾದುದು. ಮತ್ತು ಜನಿಸುವ ಮಕ್ಕಳಿಗೆ ಅನ್ಯಾಯ ಮಾಡಿದಂಥಾದ್ದು. ಈ ತರಹ ಬೀಜಾವಾಪಕ್ಕೆ ಕಾರಣಭೂತನಾದ ತಾಯಿ ದನದ ಜಾತಿಗೆ ಸೇರುವ ದರ್ಜೆಗೆ ಇಳಿಸುವಳು.

ಹೆಂಡತಿಯು ಗರ್ಭೋತ್ಪತ್ತಿಗಾಗಿ ಈ ರೀತಿ ಗಂಡನಿಂದಲೇ ಹೊಂದಿದರೂ ಅದು ಪಾಪಕರವು. ಸ್ತ್ರೀಯು ತನ್ನ ಗಂಡನಲ್ಲದ ಇತರರ ಬೀಜವನ್ನು ಸ್ವೀಕರಿಸುವುದು ವ್ಯಭಿಚಾರಕ್ಕೆ ಸರಿಸಮಾನವು.

ಈ ತರಹ ಮಕ್ಕಳು ಮನೆಯಲ್ಲಿ ಒನನವಾಗುವುದು ಮತ್ತು ಇಂಥವುಗಳನ್ನು ತಂದೆಯು ಸಾಕುವುದೂ ಧರ್ಮಕ್ಕೂ ನೀತಿಶೀಲಕ್ಕೂ ತಕ್ಕುದಲ್ಲ. ಈ ತರಹ ಪದ್ಧತಿಯನ್ನು ಗಂಡನಾಗಲೀ ಹೆಂಡತಿಯಾಗಲೀ ಅನುಮೋದಿಸಿದರೂ, ಇ ಕಾರ್ಯದ ಅನೀತಿಯಿಂದ ಪಾರಾಗುವ ಹಾಗಿಲ್ಲ.

ವೈದ್ಯರು ಈ 'ಟಿಸ್ಟ್ ಟ್ಯೂಬ್' ಶಿಶುಗಳನ್ನು ಹುಟ್ಟಿಸುವುದನ್ನು ನಿರಾಕರಿಸಬೇಕು ಮತ್ತು ನೈಸರ್ಗಿಕ ಸಂತಾನವೃದ್ಧಿ ಸಡಿಲುವುದರಲ್ಲಿ ಆಸಕ್ತರಾಗಬೇಕೆಂದೂ,

ಈ ತರಹ ಸಂತಾನವೃದ್ಧಿಯನ್ನು 1897 ರಲ್ಲಿಯೂ ಕ್ರೈಸ್ತ ಚರ್ಚಿನವರು ನಿಷೇಧಿಸಿದ್ದರು. ಆದ್ದರಿಂದ ಈಗಲೂ ಕ್ಯಾಥೊಲಿಕ್ ಡಾಕ್ಟರುಗಳು ಈ ತರಹ ಸಂತಾನವೃದ್ಧಿಗೆ ಸಮ್ಮತಿಸಲಾಗದು, ಎಂದು ತಿಳಿಸಿ, ಈಗಿನ ಯುವಕ ವೈದ್ಯರಿಗೆ ಬುದ್ಧಿವಾದ ಹೇಳಿದರು.

ಪಾರ್ಥವ ವತ್ಸರ ಸಾವನ್ನ ಸಂವತ್ಸರಗಳ ಫಲಗಳು

ಪಾರ್ಥವನಾವು ಸಂವತ್ಸರದಲ್ಲಿ ಗುರುವು ರಾಜನಾಗಿಯೂ, ಸೇನಾಧಿಪತಿಯಾಗಿಯೂ, ಆಘರ್ಾಧಿಪತಿಯಾಗಿಯೂ, ಮೇಘಾಧಿಪತಿಯಾಗಿಯೂ, ಶುಕ್ರನು ಮಂತ್ರಿಯಾಗಿಯೂ ಇರುವುದರಿಂದ ದೇಶದಲ್ಲಿ ಶುಭಕಾರ್ಯಗಳು ಹೆಚ್ಚಾಗಿ ನಡೆಯುತ್ತವೆ. ಸ್ತ್ರೀಯರು ಸರ್ವ ಸ್ವಾತಂತ್ರ್ಯತೆಯನ್ನು ಹೊಂದಿದವರಾಗಿರುತ್ತಾರೆ ಸಸ್ಯಧಾನ್ಯಾಧಿಪತಿಗಳು ಚಂದ್ರಶನಿಗಳಾದುದರಿಂದ ಜಲಾಧಾರ ಬೆಳೆಗಳು ಚೆನ್ನಾಗಿ ಫಲಿಸವವ. ಕಪ್ಪು ಭೂಮಿಯಲ್ಲಿ ಚೆನ್ನಾಗಿ ಬೆಳೆಯಾಗುವುದು. ಆಘರ್ಾಧಿಪತಿಯು ಗುರುವಾದುದರಿಂದ ಬೆಳೆಗಳು ತಗ್ಗುವುವು. ಒಳ್ಳೆ ಬಂಗಾರದಗಳ ಬೆಲೆಯು ತಗ್ಗುವುದು. ಮಳೆಯು ಚೆನ್ನಾಗಿ ಬೀಳುವುದು. ಪಶುಗಳು ಆರೋಗ್ಯದಿಂದಿರುತ್ತವೆ. ಬೆಳೆಗಳು 8 ರಲ್ಲಿ 5 ಭಾಗಕ್ಕೆ ಮೀರಿ ಬೆಳೆಯುತ್ತವೆ.

ಮುಂದೆ ಬರುವ ವ್ಯಯನಾವು ಸಂವತ್ಸರದಲ್ಲಿ ರಾಜನು ಬುಧನಾಗಿಯೂ, ಮಂತ್ರಿಯು ಶನಿಯಾಗಿಯೂ, ಸೇನಾಧಿಪತಿ ಶನಿಯಾಗಿಯೂ, ಧಾನ್ಯಾಧಿಪತಿ ರವಿಯಾಗಿಯೂ, ಸಸ್ಯಾಧಿಪತಿ ಕುಜನಾಗಿಯೂ ಇರುತ್ತಾನಾದುದರಿಂದ ಬೆಳೆಯು ಕಡಮೆ. ಮೇಘಾಧಿಪತಿಯು ಶುಕ್ರನಾಗಿರುವುದರಿಂದ ಒಳ್ಳೇ ಮಳೆ ಬೀಳುವುದು. ಶುಭಾಶುಭ ಫಲಗಳು ವ್ಯಯ ಸಂವತ್ಸರದಲ್ಲಿ ಸಮವಾಗಿರುತ್ತವೆ

ಂ ಂ

ಅಮೋಘ ಚಿಕಿತ್ಸೆ

ನ್ಯೂಯಾರ್ಕಿನ ನ್ಯಾಷನಲ್ ಅಸ್ಪತ್ರೆಯಲ್ಲಿ ಇದುವರೆವಿಗೆ 44 ಸಾವಿರ ಮಂದಿ ಮಾತಾಡಲಾರದಿದ್ದವರಿಗೆ ಮಾತನಾಡಲು ಬರುವಂತೆ ಚಿಕಿತ್ಸೆ ಮಾಡಿರುತ್ತಾರೆ. ಅನೇಕರಿಗೆ ನಾಲಿಗೆಮೇಲೆ ಶಸ್ತ್ರ ಚಿಕಿತ್ಸೆ ಮಾಡಿ ಗುಣಹೊಂದದವರಿಗೆ ಕುತ್ತಿಗೆಯಲ್ಲಿ ಒಂದು ರಂಧ್ರ ಮಾಡಿ ಗಾಳಿ ಒಳಗೆ ಹೋಗುವಂತೆ ಮಾಡಿ, ಸರಾಗವಾಗಿ ಮಾತನಾಡಲು ಮಾಡುವರು. ಈ ತರಹ ಚಿಕಿತ್ಸೆ ಮಾಡುವ ಆಸ್ಪತ್ರೆ ಪ್ರಪಂಚದಲ್ಲೆಲ್ಲಾ ಇದು ಒಂದೇ ಒಂದು.

ವಿವಿಧ ವಿಷಯ

ಅನೇರಿಕನರು ಒಂದು ಜರ್ಮನ್ ನಗರವನ್ನು ಹಿಡಿದಾಗ ಒಂದು ದಿನದ ಹುಟ್ಟಿಗೆ ಅಲ್ಲಿ ಖೈದಾಗಿದ್ದ ಯುಗೋಸ್ಲೇವಿಯದವನನ್ನು ಗೌರ್ನರನ್ನಾಗಿ ಮಾಡಿದರು.

ಂ ಂ

ಮದರಾಸಿನ ಜಸ್ಟಿಸ್ ಪಾರ್ಟಿಯವರಿಗೆ ಈಗ ಜ್ಞಾನೋದಯವಾಗಿ ಭಾರತಕ್ಕೆ ಸಂಪೂರ್ಣ ಸ್ವಾತಂತ್ರವೇ ಬೇಕೆಂದು ಪ್ರಕಟಿಸಿರುವರು.

ಂ ಂ

ಭಾರತದ ರಕ್ಷಣಾ ಇಲಾಖೆಯ ವಿನಃ ಭಾಕಿ ಎಲ್ಲಾ ಇಲಾಖೆಗಳನ್ನೂ ಭಾರತೀಯರಿಗೆ ಮಹಿಸಲು ಲಾರ್ಡ್ ವೇವೆಲ್ಲರು ಬ್ರಿಟಿಷ್ ಸರ್ಕಾರಕ್ಕೆ ಸೂಚನೆ ಕೊಟ್ಟಿರುತ್ತಾರಂತೆ.

ಂ ಂ

ಮಧುರೆಯಲ್ಲಿ ಸಿನಿಮಾ ನಟಿ ರಾಜಮಣಿಯು ಸೂಳಗಾರಿಕೆ ಗೃಹವನ್ನಿಟ್ಟಿದ್ದಳೆಂದು ಅಲ್ಲಿದ್ದ ಕೆಲವು ಯುವತಿಯರನ್ನು ಬಿಡುಗಡೆ ಮಾಡಿ ರೂ. 10 ಜುಲ್ಮಾನೆಯಾಯಿತು.

ಂ ಂ

ರಾಜಕೀಯ ಖೈದಿಗಳನ್ನು ಮೊದಲು ಬಿಡಿ. ಅನಂತರ ಶಾಂತಿಗಳ ಅಧಿಕಾರ ಸ್ವೀಕಾರ ಯೋಚಿಸುವೆವು. ಎಂಬುದು ಗಾಂಧೀಜೀಯವರ ವಾದ.

ಂ ಂ

ಭಾರತ ರಾಜಕೀಯ ಖೈದಿಗಳನ್ನು ಬಿಡಲು ಲಾರ್ಡ್ ವೇವೆಲ್ಲರೂ, ಮಿ || ಎಮರಿಯವರೂ ಒಂದು ತೀರ್ಮಾನಕ್ಕೆ ಬಂದಿರುತ್ತಾರೆಂದು ಗೊತ್ತಾಗಿದೆ.

ಂ ಂ

ಅಮೇರಿಕಾ 3 ನೇ ಸೇನೆಯವರಿಗೆ ಜರ್ಮನಿಯಲ್ಲಿ ತಾವು ಗೆದ್ದ ಪ್ರದೇಶದಲ್ಲಿ ಸಿಕ್ಕಿರುವ ಧನದ ರಾಶಿ ವಿವರ—

100 ಟ್ರಕ್ ಭಂಗಾರ.
ಹೇರಳವಾಗಿ ನೋಟುಗಳು.
ಕೊಳ್ಳೇ ಹೊಡೆದ ಕಲಾವಸ್ತುಗಳು,
3000 ಮಿಲಿಯ ಮಾರ್ಕ್ ಹಣ.
200 ಮಿಲಿಯ ಅಮೇರಿಕಾ ಡಾಲರ್ ನೋಟು.
10 ಮಿಲಿಯ ಫ್ರೆಂಚ್ ಕಾಸು.
11[illegible] ಬ್ರಿಟಿಷ್ ಪೌಂಡು.
4 ಮಿಲಿಯ ನಾರ್ವೆ ಹಣ.
25 ಪೌಂಡು ಚಿನ್ನದ 400 ಚೀಲ-

ಕಲ್ಕತ್ತಾದಲ್ಲಿ ಸರ್ಕಾರಿ ಡಿಪೋಗಳಲ್ಲಿ 75000 ಮಣ ಅಕ್ಕಿ ಮುಗ್ಗಲು ಹಿಡಿದು ಬಿದ್ದಿದೆ.

ಂ ಂ

ಲಾರ್ಡ್ ವೇವೆಲ್ಲರು ಭಾರತಕ್ಕೆ ಬರೀ ಕೈಸಲ್ಲೆ ಬರುವುದಿಲ್ಲವೆಂದು ಲಂಡನ್ನಿನಲ್ಲಿ ಸುದ್ದಿ ಹರಡಿದೆ.

ಂ ಂ

ಬ್ರಿಟನ್ನಿನ ಅತಿ ದೊಡ್ಡದಾದ ಕಿಟಕಿಯೊರ್ಕ ಮಿನಿಸ್ಟರಿನಲ್ಲಿರುವ ಈಸ್ಟ್ ಎಂಡೋ. ಇದರ ಉದ್ದ 75 ಅಡಿಗಳು.

ಂ ಂ

ಈಗ ಜರುಗುವ ಸ್ಯಾನ್‌ಫ್ರಾನ್ಸಿಸ್ಕೊ ಸಮ್ಮೇಳನಕ್ಕೆ ಖರ್ಚು ಅಮೇರಿಕಾಕ್ಕೆ 900000 ಡಾಲರ್ ಆಗುತ್ತದಂತೆ. ಅಂದರೆ ಈಗಿನ ಯುದ್ಧದ 35 ನಿಮಿಷದ ಖರ್ಚು ಎಂದಂತಾಯಿತು.

ಂ ಂ

ಸ್ಯಾನ್‌ಫ್ರಾನ್ಸಿಸ್ಕೋ ಸಮ್ಮೇಳನವು ಅಪಜಯವಾದರೆ ಅದು 3 ನೇ ಯುದ್ಧಕ್ಕೆ ಪೀಠಿಕೆಯೆಂದು ಬ್ರಿಟನ್ನಿನಲ್ಲಿರುವ ಭಾರತೀಯ ಕಾಂಗ್ರೆಸ್ಸಿನವರ ಅಭಿಪ್ರಾಯವಾಗಿದೆ.

ಂ ಂ

ಈಗ ಸ್ಯಾನ್‌ಫ್ರಾನ್ಸಿಸ್ಕೋದಲ್ಲಿ ಸೇರುವ ಸಮ್ಮೇಳನವು ಸರ್ಕಾರದ ಸಮ್ಮೇಳನವೇ ಹೊರ್ತು, ಪ್ರಜೆಗಳ ಸಮ್ಮೇಳನವಲ್ಲವೆಂದು ಮುಂಬೈ ಶ್ರೀ ಮಸಾನಿಯವರು ಹೇಳಿರುತ್ತಾರೆ.

ಂ ಂ

ರಾಣಿ ಮೇರಿ ಉಪಯೋಗಿಸುತ್ತಿದ್ದ ಬೀಸಣಿಗೆಯನ್ನು ಬೊಂಬಾಯಿನಲ್ಲಿ ಹರಾಜು ಮಾಡಿ ಬಂದ 2000 ರೂ.ಗಳನ್ನು ಯುದ್ಧ ನಿಧಿಗೆ ಸೇರಿಸಿದರು.

ಂ ಂ

ಅಮೇರಿಕದಲ್ಲಿ ಮಾಂಸಕ್ಕೆ ಅಭಾವವಾದ್ದರಿಂದ ಜುಲೈನಿಂದ ಒಂಡು ಪೌಂಡು ಮಾಂಸವನ್ನು ಇಂಗ್ಲೆಂಡಿಗೆ ಕಳುಹಿಸುವುದಿಲ್ಲವೆಂದು ತೀರ್ಮಾನಿಸಿರುವರು.

ಂ ಂ

ತನಗೆ ಡಾರ್ಡನಲ್ಸ್ ಮೇಲೆ ಅಧಿಕಾರ ಮತ್ತು ಕಾಕ್ಸಸ್ ತಗ್ಗಲಿನಲ್ಲಿ ಸ್ವಲ್ಪ ಸ್ಥಳವನ್ನು ತುರ್ಕಿಯು ಕೊಡಬೇಕೆಂದು ರಷ್ಯಾ ಕೇಳಿರುವುದು.

ಂ ಂ

ಕೋಲಾತಪ ಚಿನ್ನದ ಗಣಿ ಬ್ರಿಟಿಷ್ ಕಂಪೆನಿಯವರಿಗೆ ನನ್ನು ಸರ್ಕಾರದ ಪರ ರೂ. 1333000 ಪರಿಹಾರದ ಹಣ ದಾನಾ ಮಾಡಿದೆ.

ಂ ಂ

ಯೂರೊಬ್ಬರ ಚಲನವಲನಗಳನ್ನು ಹದ್ದಿನಲ್ಲಿರಿಸಲು ಮೈಸೂರು ಸರಕಾರವು ರೆಸ್ಟ್ರಿಕ್ಷನ್ ಮತ್ತು ಡಿಟೆನ್ಷನ್ ಶಾಸನವನ್ನು ಜಾರಿಗೆ ತಂದಿರುವರು. 3-4-45 ರಿಂದ ಜಾರಿಗೆ ಬಂದಿದೆ, ಯುದ್ಧ ಮುಗಿಯುವವರೆಗೂ ಜಾರಿಯಲ್ಲಿರುವುದು.

ಈ ವಾರದ ಭವಿಷ್ಯ

(ಓಂ ಜ್ಯೋತಿಷ್ಯರಿಂದ)

ಮೇಷ— ಶುಭ ಫಲಗಳು ಹೆಚ್ಚು. ಅಲ್ಪ ನಷ್ಟದ ಸಂಭವವಿದೆ. ಉದ್ಯೋಗಾದಿಗಳಲ್ಲಿ ಪ್ರೋತ್ಸಾಹ ವಿರುತ್ತದೆ. ಕೆಲಸಕಾರ್ಯಗಳು ನಿರ್ವಘ್ನವಾಗಿ ನಡೆಯುತ್ತವೆ.

ವೃಷಭ— ಮಿಶ್ರ ಫಲ. ಶೂನ್ಯ ಲಾಭ. ಜಾಗ್ರತೆಯಿಂದ ವರ್ತಿಸಿದಲ್ಲಿ ಸ್ವಲ್ಪ ಲಾಭವೂ ದೊರೆಯಬಹುದು. ಆರೋಗ್ಯವು ಆಷ್ಟು ಚೆನ್ನಾಗಿರದು ಸಹನೆಯು ಅವಶ್ಯಕ

ಮಿಥುನ— ಮಿತ್ರರಿಂದ ಪ್ರೋತ್ಸಾಹ ದೊರೆಯುವುದು. ಬಂಧುವರ್ಗದವರಿಗೆ ಪ್ರೀತಿಪಾತ್ರರಾಗಿರಿ. ಧನಲಾಭ ಸ್ವಲ್ಪ ಮಟ್ಟಿಗೆ ಕಾಣುತ್ತದೆ. ಮುಖ ಗೋಷದಿಂದ ದೂರರಾಗಿರಲು ಯತ್ನಿಸಿ.

ಕರ್ಕಾಟಕ— ಗೃಹಗತಿ ಇನ್ನೂ ಚೆನ್ನಾಗಿಲ್ಲ. ಆದರ ದೈನ್ಯತೆ ಇಲ್ಲದೇ ಇಲ್ಲ. ಧನಾಗಮನ ಎಳಂಬವಾಗುವುದು. ಸಹನೆಯಿಂದ ವರ್ತಿಸಿ

ಸಿಂಹ— ಕೋಪವನ್ನು ಒತ್ತಟ್ಟಿಗಿಟ್ಟಲ್ಲಿ ಈ ವಾರ ಶುಭವಾಗಿ ಪರಿಣಮಿಸುವುದು. ತಾಳಿದವನು ಭಾಳಿಯಾನು ಎಂಬ ನಾಣ್ನುಡಿಯನ್ನು ನೆರೆಯಬೇಡಿ. ಆರೋಗ್ಯವು ಅಷ್ಟು ಹಿತಕರವಾಗಿರದು. ಬಾಕಿ ವಿಷಯಗಳು ತಕ್ಕಮಟ್ಟಿಗಿವೆ.

ಕನ್ಯಾ— ಎಚ್ಚರದಿಂದಿದ್ದಲ್ಲಿ ಶುಭ ಫಲಗಳನ್ನೇ ಸೂರೆಗೊಳ್ಳುವಿರಿ ಧನ ಲಾಭವು ಅಷ್ಟೊಗಿರುವುದಿಲ್ಲ. ಮನಸ್ಸು ಚಂಚಲವಾಗಿರುತ್ತದೆ.

ತುಲಾ— ಚಿಂತೆಯು ಮನಸ್ಸನ್ನು ಕಾಡಿಸುತ್ತಿರುತ್ತಾದರೂ, ಕೈ ಹಾಕಿದ ಕೆಲಸಗಳಲ್ಲಿ ಜಯಶೀಲರಾಗುವಿರಿ, ಧನ ಲಾಭವಾಗಿ ಇಷ್ಟಾರ್ಥಗಳು ಈಡೇರುವುವು

ವೃಶ್ಚಿಕ— ಧನನಷ್ಟ. ವ್ಯವಹಾರದಲ್ಲಿ ಹೆಚ್ಚು ಜಾಗ್ರತೆಯಿಂದ ವರ್ತಿಸದಿದ್ದಲ್ಲಿ ಕಷ್ಟಗಳು ಸಂಭವಿಸಬಹುದು, ಹಿರಿಯರಲ್ಲಿ ನಮ್ರತೆಯಿಂದ ವರ್ತಿಸಿ.

ಧನಸ್ಸು— ವ್ಯವಹಾರದಲ್ಲಿ ಯಶ, ಮಂಗಳ ಕಾರ್ಯಗಳಲ್ಲಿ ಭಾಗವಹಿಸಿ ಸಂತೋಷ ಪಡುವಿಕೆ, ಈ ಫಲಗಳು ಕಾಣಬರುತ್ತವೆ. ಆರೋಗ್ಯ ವಿಷಯದಲ್ಲಿ ಎಚ್ಚರಿಕೆಯಿಂದಿರುವುದು ಒಳ್ಳೆದ.

ಮಕರ— ಸಮಫಲ. ಧನಲಾಭ, ವ್ಯವಹಾರದಲ್ಲಿ ಅಭಿವೃದ್ಧಿ, ರಾಜಸನ್ಮಾನ ಇವೆಲ್ಲಾ ಉಂಟು. ಕುಟುಂಬದವರ ಆರೋಗ್ಯ ವಿಷಯದಲ್ಲಿ ಜಾಗ್ರತೆ ಅವಶ್ಯಕ.

ಕುಂಭ— ಜಯಪ್ರಾಪ್ತಿ, ಉತ್ಸಾಹ ಪ್ರಾಪ್ತಿ, ಧನಲಾಭ, ವ್ಯರ್ಥಲಾಭ, ಯಶೋಲಾಭ, ಇವೆಲ್ಲಾ ನೀವು ವಿವೇಕದಿಂದಿದೆ ವರ್ತಿಸಿದಲ್ಲಿ ಲಭಿಸುವುವು.

ಮೀನ— ಸ್ವಲ್ಪ ಮನೋವ್ಯಾಕುಲತೆ, ಆರೋಗ್ಯವು ತಕ್ಕಮಟ್ಟಿಗೆ ಇರುತ್ತದೆ ಧನಲಾಭ ಹೆಚ್ಚಾಗಿರುವುದಿಲ್ಲ. ನವಗ್ರಹ ಜಪ ಮಾಡಿಸಿ ಕಷ್ಟಗಳು ಪಲಾಯನವಾಗುವುವು,

ಆರೋಗ್ಯ ಸೌಖ್ಯ ನಮ್ಮ ಜನ್ಮ ಹಕ್ಕು

— ಪ್ರತಿ ಊಟವನ್ನು ಔತಣದಂತೆ ಮಾಡಿಕೊಳ್ಳಿರಿ —

ನಿಮಗೆ ಆರೋಗ್ಯಕರವಾದ, ಸಂತಸದಾಯಕವಾದ ಊಟ, ರುಚಿಕರವಾದ ಉಪ್ಪಿನಕಾಯಿ, ಸಾರು, ಹುಳಿ, ವ್ಯಂಜನ ಬೇಕಾದರೆ ಟಿ.ಜಿ. ಹಿಂಗನ್ನು ಸ್ವಲ್ಪಹಾಕಿ. ಆಗ ನೋಡಿ ಅದರ ಗುಣ. ಒಂದು ದಿವಸ ಉಪಯೋಗಿಸಿದರೆ ಆ ಮೇಲೆ ಟಿ.ಜಿ. ಹಿಂಗನ್ನು ಪ್ರತಿದಿನವೂ ಉಪಯೋಗಿಸುತ್ತೀರಿ..

1 ಪೌಂಡ್, ಅರ್ಧ ಪೌಂಡ್, ಕಾಲು ಪೌಂಡ್ ಮತ್ತು 1 ಪಲಂಗಳಲ್ಲಿ ಎಲ್ಲಾ ವ್ಯಾಪಾರಿಗಳಲ್ಲೂ ಮತ್ತು ಈ ಕೆಳಗಿನ ವಿಳಾಸದವರಲ್ಲೂ ದೊರೆಯುವುದು.

ವಲ್ಲಭದಾಸ್ ತೇಜ್ ಪಾಲ್,

ಹಿಂಗು, ಕಸ್ತೂರಿ, ಕೇಸರಿ ವ್ಯಾಪಾರಿಗಳು,

14 ಗೋವಿಂದಪ್ಪ ನಾಯಕ್ ಬೀದಿ, ಜಿ.ಟಿ. ಮದರಾಸ್.

ಕಳೆದವಾರ

ಮುಂಬೈನ 'ಚರ್ಚಿಲ್ ಕಾಫೆ' ಹೋಟಲ್‌ನಲ್ಲಿ ಒಬ್ಬ ಕ್ರಿಶ್ಚಿಯನ್ ಡಾಕ್ಟರು ಹಾಗು ಅವನ ಕಾಂಪೌಂಡರೂ ಟೀ ಕುಡಿಯಲು ಹೋದರು- ಅವರು ಕುಳಿತಿದ್ದ ಜಾಗದಿಂದ ಎಬ್ಬಿಸಿ ಮತ್ತೊಂದು ಟೇಬಲ್ (ಒಬ್ಬಿ ಇಲ್ಲದ) ಹತ್ತಿರಕ್ಕೆ ಓಡಿಸಿದರು, ಬಟ್ಟೆಹಾಕಿರುವ ಟೇಬಲ್ ಯೂರೋಪಿಯನ್ನರಿಗೆ ಮಾತ್ರವಂತೆ !

ಕರ್ದಾರ್ ವೊಡಕ್ಷನ್ನಿನವರು 'ಷಹಜಹಾನ್' ನಲ್ಲಿ ಅಭಿನಯಿಸಲು ಸಂಗೀತ ಬಲ್ಲ, ನೋಡಲು ಚೆನ್ನಾಗಿರುವ, ಉರ್ದು ಚೆನ್ನಾಗಿ ತಿಳಿದು ಮಾತನಾಡಬಲ್ಲ ಮೂರು ಮಂದಿ ಯುವತಿಯರನ್ನು ಚುನಾಯಿಸುತ್ತಿರುವರು. ಇವರಿಗೆ ತಲಾ 50 ಸಾವಿರ ರೂ. ಕೊಡುವವರಾಗಿರುವರು.

ಕಲ್ಕತ್ತಾ ಏ 10— ಬಂಗಾಳಾದಲ್ಲಿ ಪ್ರಬಲ ಕಾಳ ಸಂತೆ ಇರುವುದೆಂದು ರೋಟರಿ ಕ್ಲಬ್ ವೀಟಿಂಗಿನಲ್ಲಿ ಮಿ || ಗ್ರೆಫಿನ್ನರು ಹೇಳಿದರು. ಭಾರತವು ಸ್ವರಾಜ್ಯದ ಮೆಟ್ಟಿಲಲ್ಲಿರುವುದು. ಆದರೆ ಲಂಚರುಷವತ್ತು, ಅಮಾವಾಸ್ಯೆ ವ್ಯಾಪಾರಗಳಿದ್ದರೆ ಏನು ಬಾಳಾದೀತೆಂದರು, 1943 ರಲ್ಲಿ ಆಹಾರ ಕ್ಷಾಮವನ್ನು ತಂದೊಡ್ಡಿದ ಭಾರಿ ಶೇಖರಣ, ಕಾಳ ಸಂತೆ, ಅಧಿಕ ಲಾಭ ಪಡೆಯುವಿಕೆಗಳು ಈಗ ಒಟ್ಟೆ ವಿಷಯದಲ್ಲಿ ತಂದೊಡ್ಡಿವೆಯೆಂದರು.

ಕ್ಷೀಪ್ರದಲ್ಲೇ ರಷ್ಯಾ ಜಪಾನ್ ಯುದ್ಧವಾಗುವ ಸಂಭವವಿಲ್ಲವೆಂದು ಜಪಾನ್ ವಾರ್ತಾ ಸಂಸ್ಥೆ ಪ್ರಕಟಿಸಿದೆ.

ಇಂಗ್ಲೆಂಡಿನಲ್ಲಿ ವತ್ತೊಬ್ಬ ನಾಜಿ ಆಫೀಸರು ಹೆರ್ ಹೆಸ್ ಇಂಗ್ಲೆಂಡಿಗೆ ಬಂದಂತೆ ನಾಲ್ಕು ವಾರಗಳ ಹಿಂದೆ ಕ್ಯಾಪ್ಟನ್ ಕ್ಲಾಸ್ ಬಂದಿರುವನು. ಈ ಸಂಧರ್ಭದಲ್ಲಿ ಪಾರ್ಲಿಮೆಂಟ್‌ನಲ್ಲಿ ಕೆಲ ಪ್ರಶ್ನೆಗಳು ಬಂದಿವೆ.

ನಾಜಿಗಳು ಹೊಸ ಆಯುಧವೊಂದನ್ನು ಕಂಡುಹಿಡಿದು ಅದರ ಪ್ರಯೋಗವನ್ನು ಪರೀಕ್ಷಿಸುತ್ತಿರುವರೆಂದು ಸ್ವಾಕ್‌ಹಾಂ ವಾರ್ತೆ.

ಚಂಕಿಂಗ್ ಏ 9 — ಈಚಿಗೆ ಆದ ರಾಜಕೀಯ ಮತ್ತು ಮಿಲಿಟರಿ ಬದಲಾವಣೆಗಳಿಂದ, ಜಪಾನರು ಬರ್ಮಾ ಮತ್ತು ಮಲೆಯಾದಿಂದ ವಾಪಸ್ಸಾಗಬಹುದೆಂದು ವರ್ತಮಾನ ಹರಡಿದೆ. ಸಾಂಘೈನಿನ ಒಂದು ಪತ್ರಿಕೆಯು ಇದಕ್ಕೆ ಕಾರಣವನ್ನು ಈ ರೀತಿ ಕೊಟ್ಟಿದೆ — ಪೆಸಿಫಿಕ್ ಮತ್ತು ಬರ್ಮಾದಲ್ಲಿನ ಸೋಲು ಜಪಾನ್ ರಾಜ್ಯಕ್ಕೆ ಒದಗಿರುವ ಭೀತಿ. ರಷ್ಯದವರ ಆಕ್ರಮಣದ ಬಗ್ಗೆ ಪೂರ್ಣ ಭದ್ರತೆ. ಚೀನಾ ದೇಶದ ತೀರದಲ್ಲಿ ಅವೇರಿಕದವರು ಬಂದಿಳಯಬಹುದೆಂಬುದು.

ಲಂಡನ್ ರೇಡಿಯೋ ಕೈಗಾರಿಕೆಯ ಕೌನ್ಸಿಲ್ಲಿನ ಪ್ರಥಮ ಅಧ್ಯಕ್ಷರಾಗಿ ಚುನಾಯಿಸಲ್ಪಟ್ಟಿರುವ ಮಿ || ಆಲ್‌ಫ್ರೆಡ್ ಕ್ಲಾರ್ಕ್‌ರವರು ಕೈವೇಲೆ ಧರಿಸಬಹುದಾದ ರೇಡಿಯೋ ಸೆಟ್‌ಗಳು ಕ್ಷಿಪ್ರದಲ್ಲೇ ದೊರೆಯಬಹುದೆಂದು ಹೇಳಿರುತ್ತಾರೆ. ಇಂಗ್ಲೆಂಡಿನಲ್ಲಿ ಫೋನೋಗ್ರಾಫ್ ಪ್ರಚುರಪಡಿಸಿದವರೂ, ಗ್ರಾಮೊಫೋನ್ ರೆಕಾರ್ಡ್ ಬಾಕ್ಸ್ ಕಂಡುಹಿಡಿದವರೂ ಇವರೇ. 20 ವಿ.ಲಿಮಿಟೆಡ್ ಬಂಡವಾಳದ ರೇಡಿಯೋ ಇಂಡಸ್ಟ್ರೀಸ್ ಕೌನ್ಸಿಲ್ ಸ್ಥಾಪಿಸಲಾಯಿತು.

ಚಿರಾಲಾದಲ್ಲಿ ವಾಹನಗಳ ಮೇಲಿನ ಕಂದಾಯ ವಜಾ ಮಾಡಿದಾರೆ.

ಪಾಟ್ನಾದಲ್ಲಿ ಕೆಲವು ವಿದ್ಯಾರ್ಥಿಗಳು ಟಿಕೀಟಿಲ್ಲದೆ ರೈಲಿನಲ್ಲಿ ಪ್ರಯಾಣ ಮಾಡಿದರೆಂದು ಅವರನ್ನೆಲ್ಲಾ ಕೂಲಿಗಳಕೈಲಿ ಹೊಡೆಸಿದ್ದರು. ಆ ಊರಿನ ವಿದ್ಯಾರ್ಥಿಗಳೆಲ್ಲಾ ಒಟ್ಟುಗೂಡಿ ರೈಲ್ವೇ ಸ್ಟೇಷನ್ನಿಗೆ ಹೋಗಿ ರೈಲ್ವೇ ಕೆಲಸಗಾರರನ್ನೆಲ್ಲಾ ಹೊಡೆದರು.

ಅಮೇರಿಕ ಸೇನೆಗಳಿಗೆ ವಿ-2 ರಾಕೆಟ್ ಬಾಂಬುಗಳು ಸಜೀವ ಸಿಕ್ಕಿ ಅದರ ಗುಟ್ಟನ್ನೆಲ್ಲಾ ತಿಳಿದುಕೊಂಡಿಯು. ಈರಾಕೆಟ್‌ಗಳು ಮನುಷ್ಯನ ಮನಸ್ಸಿಗಿಂತ ಹೆಚ್ಚು ವೇಗದಲ್ಲಿ ಜೋಗುವುದರಿಂದಭೂಮಿಯಿಂದ ಇದನ್ನು ಬಿಡಲು ಸಾಧ್ಯವಿಲ್ಲ (ಯು. ವಾರ್ತೆ)

ಶುದ್ಧವಾದುದೂ ಗ್ಯಾರಂಟಿ. ಯಾವ ಅಪರಿಶುದ್ಧವಾದ ಪದಾರ್ಥ ಮಿಶ್ರವಾಗಿಲ್ಲ. ದೇವಸ್ಥಾನಗಳಲ್ಲೂ, ಪೂಜಾಕಾರ್ಯಕ್ಕೂ, ಔಷಧಗಳಿಗೂ, ಆಹಾರಗಳಿಗೂ, ಶುದ್ಧ ಸಂತೋಷ ಕಾರ್ಯಗಳಲ್ಲಿಯೂ ಉಪಯೋಗಿಸಲರ್ಹವಾಗಿದೆ.

.... ಶ್ರೀ ಓಂ ಬ್ರಾಂಡ್ ಕೇಸರಿ ....

ಕೇಸರಿಯನ್ನು ಗಿರಾಕಿಗಳ ಅನುಕೂಲಕ್ಕಾಗಿ 1 ತೊಲ, 5 ತೊಲ, 1 ಪೌಂಡ ಅಥವ ಹೆಚ್ಚಾಗಿ ಬಿಕ್ರಿಗೆ ಇಡಲಾಗಿದೆ.

ಪಾವರ್ ಬ್ರಾಂಡ್

ಓಂ ಬ್ರಾಂಡ್ ಕೇಸರಿಯ ಪುಡಿಯನ್ನು ಕಾಲು ತೊಲ, ಅರ್ಧ ತೊಲ, ಒಂದು ತೊಲ, ಐದು ತೊಲ ಮತ್ತು ಒಂದು ಪೌಂಡುಗಳಲ್ಲಿ ಬಿಕರಿಗೆ ಏರ್ಪಾಡಾಗಿದೆ

ಅಲ್ಲದೆ ಪುಡಿ ಮತ್ತು ಮಿಶ್ರ ಕೇಸರಿಯನ್ನು 16/1 ತೊಲ, 8/1 ತೊಲ, 4/1 ತೊಲ, ಅರ್ಧ ತೊಲ ಒಂದು ತೊಲ ಐದು ತೊಲ ಮತ್ತು ಪೌಂಡ್‌ಗಳಲ್ಲಿಯೂ ಬಿಕರಿಗೆ ಇಟ್ಟಿದೆ. ಇವು ಹೊಟಲ್ ಉಪಯೋಗಕ್ಕೆ ಉಪಯುಕ್ತವಾದುದು. ಒಂದು ಸಲ ಉಪಯೋಗಿಸಿದರೆ ನಮ್ಮ ಕೇಸರಿಯ ಮಹತ್ವ ತಿಳಿಯುವುದು.

ಎಲ್ಲಾ ಪರ್ತಕರು ಈ ಕೇಸರಿಯನ್ನು ಮೂರುವರು. ಮತ್ತು, —

ವಲ್ಲಭದಾಸ್ ತೇಜ್‌ಪಾಲ್ ಹಿಂಗು, ಕೇಸರಿ, ಪಚ್ಚಕರ್ಪೂರ ಪರ್ತಕರು
14. ಗೋವಿಂದಪ್ಪ ನಾಯಿಕ ಬೀದಿ ಜಿ.ಟಿ. ಮದರಾಸ್.

ವಿವಿಧ ವರ್ತಮಾನ

ಅಮೇರಿಕಾದ ಪ್ರೆ. ರೂಸ್ವೆಲ್ಟರು ಕಳೆದ ಬುಧವಾರ ಮಧ್ಯಾಹ್ನ ಜಾರ್ಜಿಯಾಡಿಸ್ಪ್ರಿಂಗ್ಸಿನಲ್ಲಿ ಕಾಲವಾದರು. ಪ್ರೆಸ್ ಪ್ರೆಸಿಡೆಂಟ್ ಹ್ಯಾರಿ ಪಿಸ್. ಟ್ರೂಮ್ಯಾನರು ಅಧ್ಯಕ್ಷರು. ವಾಷಿಂಗ್ಟನ್ನಿನಲ್ಲಿ ಮೊನ್ನೆ ರಮಾಧಿ ಕ್ರಿಯೆಗಳು ನಡೆದವು.

ಮಾಣಿಕಚಂದ್ ನೋತೀಚಂದ್ ಪಾರಾದಾರವಾಜ್ಯ ಎಂಬುವರಿಗೆ 33 ವರ್ಷಗಳ ಹಿಂದೆ ಗಿರವಿ ಎಂಬಲ್ಲಿ ಪೋಸ್ಟು ಮಾಡಿದ ಕಾಗದವು ಮಾರ್ಚ್ 19 ನೇ ತಾರೀಖಿನ ದಿನ ಮೆಲ್ವಿಳಾಸದವನ ಮೊಮ್ಮಗನಿಗೆ ಕೊಡಲಾಯಿತಂತೆ. ಈ ಕಾಗದದ ವಿಳಾಸದಾರನು ಎಂದೋ ಸತ್ತುಹೋಗಿದ್ದನಂತೆ.

ವಿಯನ್ನಾದಲ್ಲಿರುವ ಜರ್ಮನರಿಗೆ ಪ್ರಾಣ ಸಂಕಟವೊದಗಿದೆಯೆಂದು, ಓಡಿಹೋಗಲು ಸಹ ಹೂರ್ಗನೇ ಇಲ್ಲವಾಗಿದೆಯೆಂದೂ ಲಂಡನ್ನಿನ ಸುದ್ದಿ ತಿಳಿಸುತ್ತದೆ.

ಸಿಂಧ್ ಸರಕಾರದವರು ಸತ್ಯಾರ್ಥ ಪ್ರಕಾಶದ ಮೇಲೆ ಮಾಡಿರುವ ನಿರ್ಬಂಧದ ಬಗ್ಗೆ ಟೀಕಾತ್ಮಕ ಭಾಷಣ ಮಾಡಿದರೆಂದು ಪ್ರಸಿದ್ಧ ಆರ್ಯಸಮಾಜದ ಬ್ರಹ್ಮಚಾರಿ ದತ್ತರೆಂಬುವರನ್ನು ಫೋಟಕಿ ಏಲೇಜ್ ಪೋಲೀಸಿನವರು ಬಂಧದಲ್ಲಿಟ್ಟಿದ್ದಾರೆ.

ಸತ್ಯವಾದಿ

ಸತ್ಯವಾದಿ ವಾರದಸಂಚಿಕೆ ಎಲ್ಲಾ ಊರುಗಳಲ್ಲೂ ಏಜಂಟರುಗಳು ಬೇಕಾಗಿದಾರೆ. ಹೆಚ್ಚಿನ ವಿಷಯಗಳಿಗೆ ಬರೆಯಿರಿ.

ಮ್ಯಾನೇಜರ್, ಸತ್ಯವಾದಿ
ಚಾಮರಾಜಪುರಂ ಮೈಸೂರು

ರಕ್ತವೃದ್ಧಿಗೆ — ಧಾತುಪುಷ್ಟಿಗೆ

ಶಕ್ತಿಸುಧಾ

ಗ್ಲೂಕೋನೇಟ್ - ಡಿ.

.... ಬಿಲ್ಲೆಗಳು ....

ಕ್ಯಾಲ್ಸಿಯಂ ಗ್ಲೂಕೋನೇಟ್
ಮತ್ತು ವಿಟಮಿನ್ ಡಿ. ಮಿಶ್ರಿತವಾಗಿದ್ದು
ಚಾಕೊಲೆಟ್‌ನಂತೆ ರುಚಿಕರವಾಗಿದೆ.

ಕ್ಯಾಲ್ಸಿಯಂ ಅಭಾವದ ಎಲ್ಲಾ ಪರಿಸ್ಥಿತಿಗೂ
ಬಸಿರುತನ ಮತ್ತು ಮಕ್ಕಳು ಸ್ತನಪಾನಮಾಡುವ ಅವಧಿಗೂ,
ಮಕ್ಕಳ ಎಲುಬುಗಳು ಪದ್ಧತಿವಾಗಲೂ ಇದನ್ನು
ಶಿಫಾರಸು ಮಾಡಲಾಗಿದೆ.

ಐ. ಟಿ. ಎಲ್. ತಯಾರಿಕೆ

ಗೌರ್ಮೆಂಟ್ ಇಂಡಸ್ಟ್ರಿಯಲ್ ಅಂಡ್ ಟೆಸ್ಟಿಂಗ್
ಲೆಬೊರೇಟರಿ

ಪೋ. ಆ. ಬೆಂಗಳೂರು — ಬೆಂಗಳೂರು

AT OPERA — From 12-4-45

POOMPAVAI

'ಪೂಂಪಾವೈ'

ಪಾತ್ರ - ರಾಮಸ್ವಾಮಿ, ಜೀವರತ್ನಂ, ಮಧುರಂ, ಕೃಷ್ಣಕ

At Ranjit

Pagli Duniya

ರಣಜಿತ್ ಟಾಕೀಸಿನಲ್ಲಿ
5 ನೇ ಅಮೋಘ ವಾರ

ಪಗಲಿ ದುನಿಯಾ

(ಹಿಂದಿ)

ನುಮ್ಮಾಜ್ ಶಾಂತಿ ನೋತಿಲಾಲ್
ಷೇಕ್‌ಮುಕ್ತಾರ್ ಪಾತ್ರವಹಿಸಿರುವರು

Edited, Printed and published by M. S. Krishna Rao, at the Satwavadi Press, Chamareja Agrahar, Mysore

For Good Printing—

L. N. Press

Sriramp[illegible] MYSORE



ಐ.ಜೆ. ಹಾಲ್, ಸರಾಫ್ ಅಂಗಡಿ
ರಸ್ತೆ ಬೀದಿ, ಮೈಸೂರು.